ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

# ನಮ್ಮ ಚಿತ್ತ ಪರೀಕ್ಷೆಯತ್ತ







ವಿದ್ಯಾರ್ಥಿಗಾಗಿ

ಶಿಕ್ಷಕರಿಗಾಗಿ

ಪೋಷಕರಿಗಾಗಿ

## 2023-24 ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆ-1, ಪರೀಕ್ಷೆ-2 ಮತ್ತು ಪರೀಕ್ಷೆ-3 ಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು / ಶಿಕ್ಷಕರು / ಪೋಷಕರಿಗೆ ಮಾಹಿತಿ

## ಪರೀಕ್ಷೆ–1, 2, 3 , ಪರೀಕ್ಷೆಗೆ ನೋಂದಣೆ ಮತ್ತು ಕನಿಷ್ಠ ಹಾಜರಾತಿ ಬಗ್ಗೆ

1. 2023–24ರ ಶೈಕ್ಷಣಿಕ ವರ್ಷದಿಂದ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ವತಿಯಿಂದ ಪರೀಕ್ಷೆ–1 ಹಾಗೂ ಪೂರಕ ಪರೀಕ್ಷೆಗೆ ಬದಲಾಗಿ ಪರೀಕ್ಷೆ–2 ಮತ್ತು ಪರೀಕ್ಷೆ–3 ಎಂದು ಒಟ್ಟು ಮೂರು (03) ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಆದರೆ ಮೂರೂ ಪರೀಕ್ಷೆಗಳನ್ನು ಬರೆಯುವುದು ಕಡ್ಡಾಯವಲ್ಲ.

2. ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ರೆಗ್ಯುಲರ್ ವಿದ್ಯಾರ್ಥಿಗಳು ಮತ್ತು ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆ–1ಕ್ಕೆ ನೋಂದಾಯಿಸಿಕೊಳ್ಳುವುದು ಕಡ್ಡಾಯ.

3. ಪರೀಕ್ಷೆ–1ಕ್ಕೆ ಹಾಜರಾಗುವ ರೆಗ್ಯುಲರ್ ವಿದ್ಯಾರ್ಥಿಗಳಿಗೆ ಶೇಕಡ 75ರಷ್ಟು ಹಾಜರಾತಿ ಕಡ್ಡಾಯವಾಗಿ ಇರಲೇಬೇಕು.

ನಿರ್ದೇಶಕರು ( ಪರೀಕ್ಷೆಗಳು )

ಅಧ್ಯಕ್ಷರು